# ಮಂಗಳೂರಿಗೆ ಮಿಟ್ಸುಬಿಶಿ ಡೀಲರ್‌ಶಿಪ್



**ಮಂಗಳೂರು:** ಮಂಗಳೂರಿನಲ್ಲಿ ಪೂರ್ಣ ಪ್ರಮಾಣದ ಮಿಟ್ಸುಬಿಶಿ ಡೀಲರ್‌ಶಿಪ್ ಶನಿವಾರ ಆರಂಭಗೊಂಡಿದೆ.

ನಗರದಲ್ಲಿ ಹಿಂದೂಸ್ತಾನ್ ಮೋಟರ್ಸ್‌ನ ಅಧಿಕೃತ ವಿತರಕರಾದ ಶ್ರೀನಿಧಿ ಆಟೋಮೊಬೈಲ್ಸ್ ವತಿಯಿಂದ ನಗರದ ಮೇರಿಹಿಲ್‌ನ ಪ್ರೇಮ್ ರೋಸ್ ಕಾಂಪ್ಲೆಕ್ಸ್‌ನಲ್ಲಿ ನಡೆದ ಸಮಾರಂಭದಲ್ಲಿ ಕೆನರಾ ಬಸ್ ಮಾಲೀಕರ ಸಂಘದ ಅಧ್ಯಕ್ಷ ರಾಜವರ್ಮ ಬಲ್ಲಾಳ್ ನೂತನ ವಿತರಣೆ ಕೇಂದ್ರ ಉದ್ಘಾಟಿಸಿದರು. ಮೂಡುಬಿದಿರೆ ಶಾಸಕ ಅಭಯಚಂದ್ರ ಜೈನ್, ಹಿಂದೂಸ್ತಾನ್ ಮೋಟರ್ಸ್‌ನ ಮುಖ್ಯ ನಿರ್ವಹಣಾಧಿಕಾರಿ ಪಿ.ವಿಜಯನ್, ಮಾರುಕಟ್ಟೆ ವಿಭಾಗದ ಮುಖ್ಯಸ್ಥ ಯೋಶಿಕಿ ವಡಾ, ಮಂಗಳೂರು ಆರ್‌ಟಿಒ ಸಿ. ಮಲ್ಲಿಕಾರ್ಜುನ, ಆಧಿನಾಥೇಶ್ವರ ಟ್ರಾನ್ಸ್‌ಪೋರ್ಟ್‌ನ ಸುಜಿತ್ ಆಳ್ವ ಶ್ರೀನಿಧಿ ಆಟೋಮೊಬೈಲ್ಸ್ ಪಾಲುದಾರರಾದ ಸಂಪತ್ ಕುಮಾರ್ ಜೈನ್, ಹರಿಶ್ಚಂದ್ರ ಹಾಗೂ ಪ್ರಸನ್ನ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಹಿಂದೂಸ್ತಾನ್ ಮೋಟರ್ಸ್‌ನ ಮುಖ್ಯ ನಿರ್ವಹಣಾಧಿಕಾರಿ ಪಿ.ವಿಜಯನ್ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 2008ರಲ್ಲಿ ಮಂಗಳೂರಿನಲ್ಲಿ ಸರ್ವಿಸ್ ಕೇಂದ್ರ ಸ್ಥಾಪಿಸಲಾಗಿತ್ತು. ಇದನ್ನೇ ಈಗ ಮೇಲ್ದರ್ಜೆಗೆ ಏರಿಸಿ ಸೇಲ್ಸ್, ಸರ್ವೀಸ್ ಹಾಗೂ ಬಿಡಿಭಾಗ ಒಳಗೊಂಡ ಪೂರ್ಣ ಪ್ರಮಾಣದ ಕೇಂದ್ರ ಸ್ಥಾಪಿಸಲಾಗಿದೆ ಎಂದು ತಿಳಿಸಿದರು.

ಮೇರಿಹಿಲ್‌ನ ಪ್ರೇಮ್ ರೋಸ್ ಕಾಂಪ್ಲೆಕ್ಸ್‌ನಲ್ಲಿ 2 ಸಾವಿರ ಚದರ ಅಡಿ ವಿಸ್ತೀರ್ಣದಲ್ಲಿ ಕೇಂದ್ರ, ಕೂಳೂರಿನಲ್ಲಿ 7 ಸಾವಿರ ಚದರ ಅಡಿ ವಿಸ್ತೀರ್ಣದ ವರ್ಕ್‌ಶಾಪ್ ನಿರ್ಮಾಣಗೊಂಡಿದೆ. ಪ್ರತಿದಿನ 15 ಕಾರುಗಳನ್ನು ನಿರ್ವಹಿಸುವ ಸಾಮರ್ಥ್ಯವನ್ನು ಈ ಘಟಕ ಹೊಂದಿದೆ ಎಂದು ಅವರು ತಿಳಿಸಿದರು.

**Publication - Vijaya Karnataka**
**Date - September 30, 2012**
**Headline - Mangalore Mitsubishi dealership**